## ಅಡುಗೆಯವರ ಅಂತಿಮ ಪಟ್ಟಿ ಮತ್ತು ಅಡುಗೆ ಸಹಾಯಕರ ಪರಿಷ್ಕೃತ ಪಟ್ಟಿ ಪ್ರಕಟ

ಗದಗ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 51 ಅಡುಗೆಯವರು ಪೈಕಿ 50 ಅಭ್ಯರ್ಥಿಗಳ ಅಂತಿಮ ಪಟ್ಟಿ ಮತ್ತು 66 ಅಡುಗೆ ಸಹಾಯಕರು ಹುದ್ದೆಯ ಅಭ್ಯರ್ಥಿಗಳ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಆನ್‌ಲೈನ್ ಮೂಲಕ ಬಿಡುಗಡೆ ಮಾಡಲಾಗಿದೆ.

ಅಡುಗೆ ಸಹಾಯಕರ ಹುದ್ದೆಗೆ ಆಯ್ಕೆಯಾದ 66 ಅಭ್ಯರ್ಥಿಗಳಲ್ಲಿ 11 ಅಭ್ಯರ್ಥಿಗಳು ಅಡುಗೆಯವರು ಹುದ್ದೆಗೂ ಆಯ್ಕೆಯಾದ ಕಾರಣ ಸರ್ಕಾರದ ನಿಯಮದಂತೆ ಜೇಷ್ಠತೆ ಹುದ್ದೆಯಾದ ಅಡುಗೆಯವರು ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳಿಂದ ಲಿಖಿತ ಒಪ್ಪಿಗೆ ಪಡೆದು ಅಡುಗೆ ಸಹಾಯಕರ ಪಟ್ಟಿಯಲ್ಲಿ ಸದರಿಯವರ ಹೆಸರನ್ನು ಕೈಬಿಟ್ಟು ಪುನಃ ಮೇರಿಟ್ ರೋಸ್ಟರ್ ಆಧರಿಸಿ 66 ಹುದ್ದೆಗಳಿಗೆ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಬಿಡುಗಡೆಗೊಳಿಸಲಾಗಿದೆ. ಈ ಪಟ್ಟಿಗೆ ಆಕ್ಷೇಪಣೆ ಸಲ್ಲಿಸುವವರು ಅಗಸ್ಟ್, 03 ರ ಸಂಜೆ 05.00 ಗಂಟೆಯೊಳಗೆ ಸಲ್ಲಿಸಬೇಕು.

ತಮ್ಮ ಆಕ್ಷೇಪಣೆಗಳನ್ನು **ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೊಠಡಿ ಸಂಖ್ಯೆ :208 ಜಿಲ್ಲಾಡಳಿತ ಭವನ ಹುಬ್ಬಳ್ಳಿ ರೋಡ್ ಗದಗ.** ಇಲ್ಲಿಗೆ ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದ ನಂತರ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗೆ ಜಿಲ್ಲಾ ವೆಬ್‌ಸೈಟ್ **http://gadag.nic.in** ಹಾಗೂ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗದಗ ರವರನ್ನು ಜಿಲ್ಲಾ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ **:08372-237414** ನ್ನು ಸಂಪರ್ಕಿಸಬಹುದು ಎಂದು ಬಿಸಿಎಂ ಇಲಾಖೆ ಅಧಿಕಾರಿ ಶ್ರೀ ಬಿ.ಕಲ್ಲೇಶ್ ರವರು ತಿಳಿಸಿರುತ್ತಾರೆ.

ಜಿಲ್ಲಾ ಅಧಿಕಾರಿಗಳು<br>
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ<br>
ಗದಗ ಜಿಲ್ಲೆ ಗದಗ